# ನಿಮ್ಮೊಡನೆ

## ‘ರಿಯಾಲಿಟಿ’ಯೊ ‘ಕ್ರ್ರಯಾಲಿಟಿ’ಯೊ?

ಕಿರುತೆರೆಯ ರಿಯಾಲಿಟಿ ಷೋಗಳು ಮತ್ತೆ ಮತ್ತೆ ಸುದ್ದಿ ಮಾಡುತ್ತಿವೆ. ಅದರಲ್ಲೂ ರಾಷ್ಟ್ರೀಯ ಚಾನೆಲ್‌ಗಳ ಹಲವು ರಿಯಾಲಿಟಿ ಷೋಗಳು ಔಚಿತ್ಯದ ಎಲ್ಲೆ ಮೀರುವಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು ಮಾಮೂಲಾಗಿದೆ. ಮನ ಬಂದಂತೆ ಮಾತನಾಡುವುದು, ಅಶ್ಲೀಲ–ಅಸಭ್ಯ ದೃಶ್ಯಗಳನ್ನು ತೋರಿಸುವುದು, ವೈಭವೀಕೃತ ಅರೆಸತ್ಯಗಳ ಪ್ರಚಾರ.. ಹೀಗೆ ಬಹುತೇಕ ಚಾನೆಲ್‌ಗಳ ರಿಯಾಲಿಟಿ ಷೋಗಳು ಕೇವಲ ಟಿಆರ್‌ಪಿ ರೇಟ್ ಹೆಚ್ಚಿಸಿಕೊಳ್ಳುವ ಅಗ್ಗದ ತಂತ್ರಗಳನ್ನೇ ನೆಚ್ಚಿಕೊಂಡಿವೆ. ಈ ರೀತಿಯ ರಿಯಾಲಿಟಿ ಷೋಗಳಿಂದ ಸಮಾಜಕ್ಕೆ ಏನು ಉಪಯೋಗವೋ ಗೊತ್ತಾಗುತ್ತಿಲ್ಲ. ರಂಜನೆಗೂ, ಅವಹೇಳನಕ್ಕೂ, ಅಪಮಾನಕ್ಕೂ ವ್ಯತ್ಯಾಸ ಗೊತ್ತಿಲ್ಲದ ಕಾರ್ಯಕ್ರಮ ನಿರೂಪಕರು; ತುಂಡು ಬಟ್ಟೆ ತೊಟ್ಟು ದೇಹದ ಬಹುತೇಕ ಭಾಗಗಳನ್ನು ಪ್ರದರ್ಶಿಸುವುದೇ ರಂಜನೆ ಎಂದು ತಿಳಿದುಕೊಂಡಿರುವ ನಟ–ನಟಿಯರು; ಯಾವ ಬೆಲೆ ತೆತ್ತಾದರೂ ಸುದ್ದಿಯಾದರೆ ಸಾಕು ಎಂದು ಹಪಹಪಿಸುವ ನಿರ್ಮಾಪಕರು.. ಎಲ್ಲರೂ ಸೇರಿ ರಿಯಾಲಿಟಿ ಷೋಗಳು ಅನೈತಿಕತೆಯ ಹಳ್ಳ ಹಿಡಿಯುವಂತೆ ಮಾಡಿದ್ದಾರೆ. ಟಿ.ವಿ ಚಾನೆಲ್‌ಗಳ ಈ ಅಗ್ಗದ ತಂತ್ರಗಳು ಕೆಲವು ಎಫ್‌ಎಂ ಚಾನೆಲ್‌ಗಳಲ್ಲೂ ಚಾಲ್ತಿಯಲ್ಲಿವೆ. ಇತ್ತೀಚೆಗೆ ಬೆಂಗಳೂರಿನ ಎಫ್‌ಎಂ ಚಾನೆಲ್ ಒಂದರ ನಿರೂಪಕನೊಬ್ಬ ಹೀಗೆಯೇ ಮನ ಬಂದಂತೆ ಮಾತನಾಡಿ, ಕನ್ನಡ ಚಿತ್ರರಂಗದ ಆಕ್ರೋಶಕ್ಕೆ ಗುರಿಯಾದ ಪ್ರಕರಣವೂ ನಡೆದಿದೆ.

ರಂಜನೆಗೂ, ಅವಹೇಳನಕ್ಕೂ, ಅಪಮಾನಕ್ಕೂ ವ್ಯತ್ಯಾಸ ಗೊತ್ತಿಲ್ಲದ ಕಾರ್ಯಕ್ರಮ ನಿರೂಪಕರು; ತುಂಡು ಬಟ್ಟೆ ತೊಟ್ಟು ದೇಹದ ಬಹುತೇಕ ಭಾಗಗಳನ್ನು ಪ್ರದರ್ಶಿಸುವುದೇ ರಂಜನೆ ಎಂದು ತಿಳಿದುಕೊಂಡಿರುವ ನಟ-ನಟಿಯರು; ಯಾವ ಬೆಲೆ ತೆತ್ತಾದರೂ ಸುದ್ದಿಯಾದರೆ ಸಾಕು ಎಂದು ಹಪಹಪಿಸುವ ನಿರ್ಮಾಪಕರು.. ಎಲ್ಲರೂ ಸೇರಿ ರಿಯಾಲಿಟಿ ಷೋಗಳು ಅನೈತಿಕತೆಯ ಹಳ್ಳ ಹಿಡಿಯುವಂತೆ ಮಾಡಿದ್ದಾರೆ.

ಮಧ್ಯಪ್ರದೇಶದ ಲಕ್ಷ್ಮಣ ಎನ್ನುವ ಯುವಕನ ಆತ್ಮಹತ್ಯೆ, ರಿಯಾಲಿಟಿ ಷೋಗಳ ಇಂತಹ ಕುರೂಪಿ ಮುಖವೊಂದನ್ನು ಇತ್ತೀಚೆಗೆ ಅನಾವರಣಗೊಳಿಸಿದೆ. ರಾಖಿ ಸಾವಂತ್ ಎಂಬ ಅರೆಬರೆ ನಟಿ ನಡೆಸಿಕೊಡುತ್ತಿರುವ ‘ರಾಖಿ ಕಾ ಇನ್ಸಾಫ್’ ಎಂಬ ರಿಯಾಲಿಟಿ ಷೋನಲ್ಲಿ ಭಾಗವಹಿಸಿದ್ದ ಲಕ್ಷ್ಮಣ ಎಂಬ ಹಳ್ಳಿಗ ಷೋನಲ್ಲಿ ರಾಖಿ ಮಾಡಿದ ಅವಮಾನ ತಾಳಲಾಗದೆ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ನಿಜಕ್ಕೂ ಹೃದಯ ಕಲಕುವಂತಹದ್ದು. ಗಂಡ–ಹೆಂಡಿರ ನಡುವಣ ಜಗಳವನ್ನು, ರಿಯಾಲಿಟಿ ಷೋಗೆ ಕರೆಸಿ ರಾಜಿ ಮಾಡುವುದಾಗಿ ಹೇಳಿದ ರಾಖಿ ಸಾವಂತ್ ಗಂಡನನ್ನು ಷಂಡ ಎಂದು ಪದೇ ಪದೇ ಹೀಗಳೆದು ಅವಮಾನ ಮಾಡಿದ್ದನ್ನು ಆತನ ಹೆಂಡತಿಯೂ ಆಕ್ಷೇಪಿಸಿದ್ದಾಳೆ. ರಿಯಾಲಿಟಿ ಷೋ ಮುಗಿದ ಬಳಿಕ ಊರಿಗೆ ಬಂದ ಲಕ್ಷ್ಮಣನಿಗೆ ಊರಿನವರೂ ಷಂಡ ಎಂದೇ ಗೇಲಿ ಮಾಡಿದ್ದಾರೆ. ಇದರಿಂದ ಮನನೊಂದ ಲಕ್ಷ್ಮಣ ಆತ್ಮಹತ್ಯೆಗೆ ಮೊರೆ ಹೋಗಿದ್ದಾನೆ. ರಿಯಾಲಿಟಿ ಷೋಗೆ ಟಿಆರ್‌ಪಿ ರೇಟ್ ಒದಗಿಸಬೇಕೆಂಬ ಹಪಾಹಪಿಯಲ್ಲಿರುವ ರಾಖಿ ಮನಬಂದಂತೆ ಮಾತನಾಡಿ ಒಂದು ಜೀವಹರಣಕ್ಕೆ ಕಾರಣಳಾಗಿದ್ದಾಳೆ. ಪೊಲೀಸರು ದೂರು ದಾಖಲಿಸಿಕೊಂಡಿದ್ದರೂ, ಟಿ.ವಿ ಷೋಗಳ ನಿರ್ಮಾಪಕರು, ನಿರೂಪಕರು ಸಮಾಜದಲ್ಲಿ ಸಾಕಷ್ಟು ಗಣ್ಯ ವ್ಯಕ್ತಿಗಳಾಗಿರುವುದರಿಂದ ಇಂತಹ ಪ್ರಕರಣಗಳಲ್ಲಿ ಸಂತ್ರಸ್ತರಾದವರಿಗೆ ಯಾವ ನ್ಯಾಯವೂ ದೊರೆಯುವುದಿಲ್ಲ.

ಇನ್ನೊಂದು ಚಾನೆಲ್‌ನಲ್ಲಿ ಪ್ರಸಾರವಾಗುತ್ತಿರುವ ‘ಬಿಗ್‌ಬಾಸ್–4’ ಕಾರ್ಯಕ್ರಮವೂ ಕೋರ್ಟ್ ಮೆಟ್ಟಿಲೇರಿದೆ. ಈ ಕಾರ್ಯಕ್ರಮ ಅಸಭ್ಯ ಹಾಗೂ ಅಶ್ಲೀಲವಾಗಿದೆ ಎಂದು ಆಕ್ಷೇಪಿಸಿ ಕೋರ್ಟಿಗೆ ಸಾರ್ವಜನಿಕರೊಬ್ಬರು ಅರ್ಜಿ ಸಲ್ಲಿಸಿದ್ದು ವಿಚಾರಣೆ ಮುಂದೂಡಲಾಗಿದೆ. ಈ ಮಧ್ಯೆ ಇದೇ ಕಾರಣಕ್ಕಾಗಿ ಈ ಕಾರ್ಯಕ್ರಮದ ಪ್ರಸಾರ ಸಮಯವನ್ನು ರಾತ್ರಿ 9ರಿಂದ 11ಕ್ಕೆ ಬದಲಾಯಿಸಬೇಕೆಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಇಲಾಖೆ ನೀಡಿರುವ ನಿರ್ದೇಶನದ ವಿಚಾರವೂ ಕೋರ್ಟ್ ಕಟಕಟೆಯಲ್ಲಿದೆ. ಸರಕಾರದ ಆದೇಶಕ್ಕೆ ಮುಂಬೈ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಸರಕಾರದ ನಿರ್ದೇಶನದಲ್ಲಿ, ಕಾರ್ಯಕ್ರಮದ ಯಾವ ಭಾಗ ಅಶ್ಲೀಲವಾಗಿದೆಯೆಂದು ಸೂಚಿಸದೆ ಇರುವುದು ಹಾಗೂ ವಕೀಲರು ಹಾಜರಾಗದೆ ಇರುವುದು ಈ ತಡೆಯಾಜ್ಞೆಗೆ ತಾಂತ್ರಿಕ ಕಾರಣವೆನ್ನಲಾಗಿದೆ. ಇಂತಹ ಕೂದಲು ಸೀಳುವ ವಾದಗಳಿಂದ ಕಾನೂನಿನ ವ್ಯಾಜ್ಯದಲ್ಲಿ ಟಿ.ವಿ ಚಾನೆಲ್‌ನವರು ಗೆಲ್ಲಬಹುದು. ಆದರೆ ಕಾರ್ಯಕ್ರಮ ನೋಡುವ ಜನರ ಮನದಲ್ಲಿ ಉಂಟಾಗುವ ವಿಕಾರಗಳನ್ನು ತಪ್ಪಿಸಲು ಸಾಧ್ಯವಿಲ್ಲ. ಬಿಗ್‌ಬಾಸ್–4 ಸಹಿತ ಹಲವಾರು ರಿಯಾಲಿಟಿ ಷೋಗಳಲ್ಲಿ ಭಾಗವಹಿಸುವ ಬಹುತೇಕರು ಉನ್ಮಾದಿತರಂತೆ ಪರಸ್ಪರ ಕೂಗಾಡುವುದು, ಕಚ್ಚಾಡುವುದು ಎಲ್ಲವೂ ಇತ್ತೀಚೆಗೆ ಮಾಮೂಲಾಗಿದೆ. ಕನ್ನಡದ ಇತ್ತೀಚಿನ ರಿಯಾಲಿಟಿ ಷೋ ಒಂದರಲ್ಲೂ ಭಾಗವಹಿಸಿದವರು ಪರಸ್ಪರ ಕಚ್ಚಾಟ ನಡೆಸಿ, ಕಾಲಿನಿಂದ ಒದ್ದು ಚೀರಾಡಿದ್ದು, ಅದನ್ನೇ ಬಹುದೊಡ್ಡ ರಂಜನೆ ಎಂಬಂತೆ ಆ ಚಾನೆಲ್ ಪದೇ ಪದೇ ಪ್ರಸಾರ ಮಾಡಿದ್ದನ್ನೂ ಇಲ್ಲಿ ಸ್ಮರಿಸಬಹುದು.

‘ರಿಯಾಲಿಟಿ’ ಷೋಗಳು ‘ಕ್ರ್ರಯಾಲಿಟಿ’ ಷೋಗಳಾಗಿ ಪೂರ್ಣ ಬದಲಾಗುವ ಮುನ್ನ ಸರಕಾರ, ಸಮಾಜ ಎಚ್ಚೆತ್ತುಕೊಳ್ಳುವುದು ಒಳ್ಳೆಯದು. ಇಂತಹ ಕಾರ್ಯಕ್ರಮಗಳು ಸಭ್ಯತೆಯ ಎಲ್ಲೆ ಮೀರದಂತೆ, ಅನೈತಿಕ ಮೌಲ್ಯಗಳನ್ನು ವಿಜೃಂಭಿಸದಂತೆ ಹಾಗೂ ಭಾಗವಹಿಸುವವರನ್ನು ಅಮಾನವೀಯವಾಗಿ ನಡೆಸಿಕೊಳ್ಳದಂತೆ ತಡೆಯುವ ದಾರಿಗಳನ್ನು ಕಂಡುಕೊಳ್ಳಬೇಕಿದೆ.

■ ಬಿ.ಎಂ. ಹನೀಫ್

